ದಿನಾಂಕಃ **02/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ಅರ್ಜಿದಾರ ಸರ್ಕಾರಿ ನೌಕರ ಎಂದರೆ ನಿಜ. ಅವರ ವಿವಾಹ 2ನೇ ಎದುರುದಾರರ ಜೊತೆ ದಿಃ 09-05-2013 ರಂದು ಆಗಿದೆ ಎಂದರೆ ನಿಜ. ಅರ್ಜಿದಾರ ಸರ್ಕಾರಿ ನೌಕರ ಆದ ಕಾರಣ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತಿದ್ದಾರೆ ಎಂದರೆ ನಿಜ. ಅವರು ಎಲ್ಲೆಲ್ಲಿ ಕೆಲಸ ಮಾಡುತಿದ್ದಾರೆ ಎಂದರೆ ಗೊತ್ತು. ಅರ್ಜಿದಾರ ಮೊದಲು ಕೊಣನೂರು ಆ ನಂತರ ಜಮುಖಂಡಿ ಅಲ್ಲಿಂದ ಅರಕಲಗೂಡಿಗೆ ಬಂದರು. ಜಮುಖಂಡಿಯಲ್ಲಿ 5 ವರ್ಷ ಇದ್ದರು. ಅವರ ಮಗ ಯಾವಾಗ ಹುಟ್ಟಿದ್ದಾರೆ ಎಂದು ಗೊತ್ತಿಲ್ಲ. ಹಾಸನದಲ್ಲಿ ಆಸ್ಪತ್ರೆಯಲ್ಲಿ ಅವರ ಮಗ ಹುಟ್ಟಿದ್ದಾನೆ. ಯಾವ ಆಸ್ಪತ್ರೆಯಲ್ಲಿ ಹುಟ್ಟಿದ್ದರು ಎಂಬ ಬಗ್ಗೆ ಜನನ ಪ್ರಮಾಣ ಇಲ್ಲ ಎಂದರೆ ಇದೆ ಎನ್ನುತ್ತಾರೆ. ಮಗು ಜನಿಸಿದ ನಂತರ ಯಾವ ಯಾವ ಶಾಲೆಯಲ್ಲಿ ಓದಿದ್ದಾರೆ ಎಂದರೆ ನಾನೇ ಓದಿಸುತಿದ್ದೇನೆ ಎನ್ನುತ್ತಾರೆ. LKG & UKG ಯನ್ನು ನಾನು ಪ್ಯಾರಾಡೈಸ್ ಶಾಲೆಯಲ್ಲಿ ಓದಿಸಿದ್ದೇನೆ. BGS Public School ನಲ್ಲಿ ಮಗು ಓದುತಿತ್ತು ಎಂದರೆ ನಾನೇ ಶಾಲಾ ಶುಲ್ಕವನ್ನು ಕಟ್ಟಿದ್ದೇನೆ ಎನ್ನುತ್ತಾರೆ. ಶಾಲಾ ಪ್ರಮಾಣ ಪತ್ರವನ್ನು ತೋರಿಸಿ ಒಪ್ಪಿಕೊಂಡಿದ್ದರಿಂದ ನಿಪಿ-8 ಎಂದು ಗುರುತಿಸಲಾಯಿತು. BGS ಶಾಲೆಯಲ್ಲಿ ಓದಿದ ಬಗ್ಗೆ ರಶೀದಿಗಳನ್ನು ತೋರಿಸಿದಾಗ ಒಪ್ಪಿಕೊಂಡಿದ್ದ ಕಾರಣ ನಿಪಿ-9 ರಿಂದ 11 ಎಂದು ಗುರುತಿಸಲಾಯಿತು. ಆ ಶುಲ್ಕವನ್ನು ನಾನೇ ಕಟ್ಟಿದ್ದೇನೆ ಎನ್ನುತ್ತಾರೆ. ಯಾರು ಶುಲ್ಕವನ್ನು ಕಟ್ಟುತ್ತಾರೋ ಅವರಿಗೆ ರಶೀದಿಯನ್ನು ಕೊಡುತ್ತಾರೆ ಎಂದರೆ ನಾನೇ ಕಟ್ಟಿದ್ದೇನೆ. ನನ್ನ ಮಗಳೂ ಕೂಡ ಕೆಲಸಕ್ಕೆ ಹೋಗುತಿದ್ದಳು. ನನ್ನ ಮಗಳು ಮೃತರಾದ ನಂತರ ಬಂದ ಹಣವನ್ನು ನಾನು, ನನ್ನ ಹೆಂಡತಿ ಮತ್ತು ಮಗ ಉಪಯೋಗಿಸಿಕೊಂಡಿದ್ದೇವೆ. ನನ್ನ ಮಗಳ ಮರಣ ನಂತರ ಮರಣ ಪ್ರಮಾಣ ಪತ್ರವನ್ನು ಕೊಟ್ಟು ಅವರ ಖಾತೆಯನ್ನು close ಮಾಡಿಲ್ಲ. ಆ ನಂತರವೂ ಕೂಡ ಅವರ ಖಾತೆಯಿಂದ ಹಣವನ್ನು ATM ಮೂಲಕ ತೆಗೆದಿದ್ದೇವೆ ಎಂದರೆ ಸರಿಯಲ್ಲ. ಮೊಕಳಿಯಲ್ಲಿ 3 ತಿಂಗಳ ಸಂಬಳವನ್ನು ನಮಗೆ ಕೊಟ್ಟರು. ಅರ್ಜಿದಾರರ ವಿರುದ್ಧ ದೂರು ನೀಡಿದ ನಂತರ ಅವರ ಮಗನನ್ನು ನಾನು

ಕರೆದುಕೊಂಡು ಹೋಗಿದ್ದೇನೆ ಎಂದರೆ ನನ್ನ ಮಗಳು ಮೃತರಾದ ದಿನ ಕರೆದುಕೊಂಡು ಹೋಗಿದ್ದೇನೆ. ಜನಪ್ರಿಯ ಆಸ್ಪತ್ರೆಯಲ್ಲಿ ಹಣ ಖರ್ಚು ಮಾಡಿದ ಬಗ್ಗೆ ಬಿಲ್ಲುಗಳನ್ನು ಕೊಟ್ಟಿದ್ದೇನೆ. ನಿಆರ್.1 ಮತ್ತು 4 ರಲ್ಲಿ ಯಾರು ಮಗುವನ್ನು ದಾಖಲು ಮಾಡಿದ್ದಾರೆ ಎಂದು ನಮೂದು ಇಲ್ಲ ಎಂದರೆ ನಿಜ. ನಿಆರ್.6 ರ ಬಗ್ಗೆ ನ್ಯಾಯಾಲಯದಲ್ಲಿ ಇನ್ನು ಪ್ರಕರಣ ಇದೆ ಎಂದರೆ ನಿಜ. ನಿಆರ್.12 ನ್ನು ಕ್ರಿಮಿನಲ್ ಪ್ರಕರಣ ಆದ ನಂತರ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ವರ್ಷಕ್ಕೆ 4 ರಿಂದ 10 ಲಕ್ಷ ಆದಾಯ ಬರುತ್ತದೆ. ನನ್ನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳನ್ನು ನಾನೇ ಸಾಕುತಿದ್ದೇನೆ.

2. ನನಗೆ ಆರೋಗ್ಯ ಸಮಸ್ಯೆ ಇದೆ. ನನ್ನ ಹೆಂಡತಿ ಆರೋಗ್ಯವಾಗಿದ್ದಾರೆ. ನನ್ನ ಹೆಂಡತಿಯನ್ನು ನಾನೇ ನೋಡಿಕೊಳ್ಳುತ್ತೇನೆ. ವ್ಯವಸಾಯವನ್ನು ನಾನು ಮತ್ತು ನನ್ನ ಮಗ ಮಾಡಿಸುತ್ತೇವೆ. ಅರ್ಜಿದಾರರು ಅವರ ಮಗನನ್ನು ನ್ಯಾಯಾಲಯದ ಆದೇಶದಂತೆ ನೋಡಿಕೊಳ್ಳಲು ಮತ್ತು ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಲು ಸಿದ್ದರಿದ್ದಾರೆ ಎಂದರೆ ಇಷ್ಟು ವರ್ಷ ಅವರ ಮಗನನ್ನು ಸರಿಯಾಗಿ ನೋಡಿಕೊಂಡಿಲ್ಲ ಎನ್ನುತ್ತಾರೆ. ನನ್ನ ಮಗಳು ಮೃತರಾಗುವವರೆಗೂ ಮಗುವಿನ ಲಾಲನೆ ಪೋಷಣೆಯನ್ನು ಅರ್ಜಿದಾರರೇ ನೋಡಿಕೊಳ್ಳುತಿದ್ದರು ಎಂದರೆ ನನ್ನ ಮಗಳು ನೋಡಿಕೊಳ್ಳುತಿದ್ದಳು ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು